ಮಾಡಲಾದೀತು. ವಿಧಿಯ ಮುಂದೆ ಯಾರ ಆಟ ನಡೆಯುತ್ತದೆ? ಆ ವರ್ಷ ಮಳೆಗಾಲದಲ್ಲಿ ಧಣಿಗಳ ತೋಟದಲ್ಲಿ ಕಬ್ಬಡ ತೆಗೆಯುವಾಗ ಅಪ್ಪಿ ಹಾವು ಕಚ್ಚಿ ಅಸುನೀಗಿದ್ದಳು. ಪುಟ್ಟ ಮಗುವನ್ನು ಕಟ್ಟಿಕೊಂಡು ಕೂಲಿ ಮಾಡಿ ಬದುಕು ನಡೆಸುವುದು ಅವನಿಗೆ ದುಸ್ತರವೆನಿಸತೊಡಗಿತ್ತು. ನೆಮ್ಮದಿಯಿಲ್ಲದ ಆ ಗುಡಿಸಲಿನಲ್ಲಿ ಹೇಗೆ ದಿನ ಸಾಗಿಸುವುದು ಎಂಬುದೇ ಚಿಂತೆಯಾಗಿತ್ತು.

ಆಗಲೇ ಈ ಗೌಡರು ಕನ್ನಡ ಜಿಲ್ಲೆಯ ಆ ಹಳ್ಳಿಗೆ ತಮ್ಮ ದೂರದ ನೆಂಟರ ಮನೆಯ ಸಮಾರಂಭಕ್ಕೆ ಬಂದಿದ್ದರು. ಆಗ ಅವರ ನೆಂಟರೊಂದಿಗೆ ತಮಗೊಬ್ಬ ನಂಬಿಕಸ್ಥ ಆಳಿನ ಅಗತ್ಯವಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದರು. 'ಬೈನೆ ಸೇಂದಿ ಮಾಡಿಕೊಂಡು, ತೋಟ ನೋಡಿಕೊಂಡು ಇದ್ದರೆ ಸಾಕು. ಅಲ್ಲಿ ತೋಟದ ಹತ್ತಿರವೇ ಗುಡಿಸಲು ಮಾಡಿಕೊಟ್ಟು ಚೆನ್ನಾಗಿ ನೋಡಿಕೊಳ್ಳುತ್ತೇನೆ' ಎಂದು ಹೇಳಿದ್ದರು.

ಆಗ ಕಣ್ಣಿಗೆ ಬಿದ್ದವನೇ ಈ ದುಮ್ಮ.

ಗೌಡರ ತೋಟಕ್ಕೆ ಹತ್ತಿರವಾಗುವಂತೆ, ಚೌಡಿ ಬನಕ್ಕೆ ಹೋಗುವ ಮಣ್ಣು ರಸ್ತೆಯ ಬದಿಯಲ್ಲೇ, ಕಾಡಂಚಿನಲ್ಲಿ ನಿರ್ಮಾಣವಾದ ಗುಡಿಸಲು ದುಮ್ಮನಿಗೆ ಹಿಡಿಸಿತು. ಪುಟ್ಟ ಅಕ್ಕಣಿ, ಗೌಡತಿ ಹೊಟ್ಟಮ್ಮ ಕೊಟ್ಟ ಹಳೆಯ ಸೀರೆ ತುಂಡನ್ನು ಅಂಡು ಮುಚ್ಚುವಂತೆ, ಕಂಕುಳು ಬಳಸಿ ಕುತ್ತಿಗೆಯ ಹಿಂಭಾಗಕ್ಕೆ ಬರುವಂತೆ ಕಟ್ಟಿಕೊಂಡು ಸಂಭ್ರಮದಿಂದ ಆ ಗುಡ್ಲಿನೊಳಗೆ ಓಡಾಡುತ್ತಿದ್ದಳು. ದುಮ್ಮ ಕಾಡಿಗೆ ಹೋದಾಗ ಹಿಂಬಾಲಿಸಿ, ಅವನು ಬೈನೆ ಮರ ಏರಿದಾಗ ಅದರ ಬುಡದಲ್ಲಿ ನಿಲ್ಲುತ್ತಿದ್ದಳು. ಅಪ್ಪನೊಂದಿಗೆ ತಾನೂ ಒಂದು ಚಿಪ್ಪು ಸೇಂದಿ ಕುಡಿಯುತ್ತಿದ್ದಳು. ಎರಡು ಹೊತ್ತೂ ಕುಸಲಕ್ಕಿ ಗಂಜಿ ಬೇಯಿಸಿ ಕುಡಿಯುತ್ತಿದ್ದರು. ವರ್ಷ ಕಳೆದಂತೆ ಅಕ್ಕಣಿಯೇ ಸ್ವತಂತ್ರವಾಗಿ ಗಂಜಿ ಹಾಗೂ ಏಡಿ ಸಾರು ಮಾಡುವಂತಾದಳು.

ಅವಳಿಗೆ ಹಳೆ ಸೀರೆ ತುಂಡಿನ 'ಕುಂಟು' ಸಾಲದಾಯಿತು. ಹೋಬಳಿ ಸಂತೆಗೆ ಹೋದಾಗ ಗೌಡರು ಎರಡು ಜೊತೆ ಲಂಗ ಜಂಪರ್ ತಂದುಕೊಟ್ಟಿದ್ದರು. ಆ ಉಡುಪಿನಲ್ಲಿ ಅಕ್ಕಣಿ ಪುಟ್ಟ ಯುವತಿಯಂತೆ ಆಕರ್ಷಕವಾಗಿ ಕಾಣುತ್ತಿದ್ದಳು.

ಗೌಡತಿ ಹೊಟ್ಟಮ್ಮನಿಗೆ ದಮ್ಮಿನ ಖಾಯಿಲೆ. ಹತ್ತು ಹೆಜ್ಜೆ ನಡೆದರೆ ನಿಂತು ಏದುಸಿರು ಬಿಡುತ್ತಿದ್ದರು. ಯುವತಿ ಅಕ್ಕಣಿ ಊರೊಳಗೆ ಹೋಗಿ ಹಂದಿ ಕೊಟ್ಟಿಗೆ ಎಲ್ಲಾ ಗುಡಿಸಿ, ಹಂದಿಗಳಿಗೆ ಮೇವು ಹಾಕಿ, ಹೊಟ್ಟಮ್ಮ ಹೇಳಿದ ಸಣ್ಣ ಪುಟ್ಟ ಕೆಲಸ ಮಾಡಿಕೊಟ್ಟು ಬರುತ್ತಿದ್ದಳು. ಬರುವಾಗ ದೋಸೆಯೋ, ಮಾಂಸದ ಸಾರೋ ಏನಾದರೂ ವಿಶೇಷವಿದ್ದರೆ ಕೊಟ್ಟು ಕಳಿಸುತ್ತಿದ್ದರು.

ಇದ್ದ ಅವರ ಒಬ್ಬನೇ ಮಗ ಪೇಟೆ ಸೇರಿದ್ದರಿಂದ ಅಕ್ಕಣಿಯೇ ಗೌಡತಿಗೆ ಪ್ರೀತಿ ಪಾತ್ರಳು. ಒಂದು ದಿನ ತನ್ನದೊಂದು ಹಳೆಯ ಸೀರೆಯನ್ನು ಉಡಿಸಿ ತಲೆ ಬಾಚಿ ಕಳಿಸಿದ್ದರು. ದುಮ್ಮನಿಗೆ ಮಗಳಲ್ಲಿ ಏನೋ ವಿಶೇಷ ಬದಲಾವಣೆಯಾಗಿದ್ದಂತೆ ತೋರಿತು. ಅವಳ ಮೈಯಿಂದ ವಿಶೇಷ ಕಾಂತಿ ಹೊಮ್ಮುತ್ತಿದ್ದುದನ್ನು ತದೇಕವಾಗಿ ಕ್ಷಣ ನೋಡಿದ್ದ.

ರಾತ್ರಿಯ ಹೊತ್ತು ಅಷ್ಟು ದೂರ ಕಾಡು ದಾರಿಯಲ್ಲಿ ಹೋಗಿ ಮೇವು ಹಾಕಿ ಬರಲು ಕಷ್ಟವಾಗುತ್ತಿದ್ದುದರಿಂದ, ಮರು ತಿಂಗಳಲ್ಲೆ ದುಮ್ಮನ ಗುಡ್ಲಿನ ಪಕ್ಕದಲ್ಲೆ ಮತ್ತೊಂದು ಗುಡಿಸಲೆದ್ದು, ಹಂದಿ ಕೊಟ್ಟಿಗೆ ಊರಿಂದ ಅಲ್ಲಿಗೆ ಬಂದಿತ್ತು. ಗೌಡರ ತೋಟ ಗದ್ದೆಯ ಕೆಲಸಕ್ಕೆ ಹೊಲಗೇರಿಯ ಆಳುಗಳು ಬರುತ್ತಿದ್ದರಾದರೂ ದುಮ್ಮ ತನ್ನ ನಿಷ್ಠೆಯಿಂದಾಗಿ ಅವರಿಗೆ ಅಚ್ಚುಮೆಚ್ಚಿನವನಾಗಿದ್ದ.

ಅವನು ಎಂತಹಾ ಮರವಿದ್ದರೂ ಸರಸರನೆ ಏರಬಲ್ಲವನಾಗಿದ್ದ. ನೆರಳು ಕಡಿಯುವುದು, ಮರಗಸಿ ಮಾಡುವುದು ಎಲ್ಲದಕ್ಕೂ ಅವನೇ ಮುಂದಾಳು.

ಮರದ ಯಾವ ಪೊಟರೆಯಲ್ಲಿದ್ದರೂ ಕಂಡು ಹಿಡಿದು ತುಡುವೆ ಜೇನು ಕಿತ್ತು ತರುತ್ತಿದ್ದ. ಕೋವಿಯಿಲ್ಲದೆ ಮಿಕಗಳನ್ನು ಬೇಟೆ ಮಾಡುವ ಹಲವಾರು ವಿಧಾನಗಳು ಅವನಿಗೆ ಕರಗತವಾಗಿದ್ದವು. ಒಣಗಿ ಟೊಳ್ಳಾದ ಬೈನೆ ದಬ್ಬಲಿನೊಳಗೆ ಅಡಗಿದ್ದ ಕಬ್ಬೆಕ್ಕುಗಳನ್ನು ಹಿಡಿದು ತರುತ್ತಿದ್ದ. ಮಿಕ ತಿರುಗಾಡುವ ಜಾಗ ಕಂಡುಹಿಡಿದು 'ಇಡಿಚಲು' ಒಡ್ಡಿ ಅದರೊಳಗೆ ಸಿಲುಕಿಕೊಂಡ ಮುಳ್ಳು ಹಂದಿ, ಬರ್ಕ, ಕಾಡು ಹಂದಿ ಮುಂತಾದ ಮಿಕಗಳನ್ನು ಹೊತ್ತು ತರುತ್ತಿದ್ದ.

ಇನ್ನು ಮುಂಗಾರಿನಲ್ಲಿ ಅಬ್ಬಿಯ ನೀರಿಗೆ 'ಹ್ಯಾಪೆ' ಕಟ್ಟಿ ಮೂಟೆಗಟ್ಟಲೆ ಗುಳಗನ ಮೀನು ಹಿಡಿಯುತ್ತಿದ್ದ. ಜೋರು ಮಳೆ ಹಿಡಿದ ದಿನಗಳಲ್ಲಿ ಕಾಡೊಳಗೆ ಎಲ್ಲೆಲ್ಲಿ

